# ಕೆ.ಸಿ.ಡಿ. ಸಮಾಚಾರ

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

KCD JOURNALISM CLUB DHARWAD

1917-2017

100 Years of Excellence in Education

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ: 9 ಸಂಪುಟ: 3 ಪುಟ: 1


## ಬೆಳಕು

ಹಲವರ ಹೊಗಳಿಕೆಗೆ
ಮೇಲೇರದೆ ಅವರಿವರ ತೆಗಳಿಕೆಗೆ
ತಳಗಿಳಿಯದೆ ತಟಸ್ಥವಾಗಿರು ಮನಸೇ,
ಅವರಿಗೆ ಬೇಕಾದಂತೆ ಹೇಳುವರು
ನಿನಗೆ ಸರಿಯನಿಸಿದಂತೆ ನೀ ನಡೆ
ಸ್ನೇಹಪೂರ್ಣಪ್ರಭುವೇ.

–ಪೂರ್ಣಚಂದ್ರ

## *Unbelievable Facts*

East or west, India is the best

Around a 100 million years ago, India was an island.

India's name is derived from the "Indus" river.

Indus Valley Civilisation is the world's oldest civilisation.

India, hence, is the world's oldest, most advanced and continuous civilisation.

India has been the largest troop contributor to the United Nations Peacekeeping Missions since its inception. India has the world's third largest active army, after China and USA.

The Tirupati Balaji temple and the Kashi Vishwanath Temple both, receive more visitors than the Vatican City and Mecca combined.

Every 12 years, a religious gathering called the Kumbh Mela occurs in India. It is the world's largest gathering of people.

The gathering is so large that the Kumbh Mela is visible from the space.

Varanasi is the oldest, continuously inhabited city in the world today.

India has more mosques (300,000 mosques) than any other nation in the world.

And the third largest Muslim population in the world.

Takshila is said to be the first every university in the world; it started around 700 BC.

Today, India has the world's largest school in terms of students, the City Montessori School in Lucknow.

It has more than 45 thousand students! Indian Railways employs more than 1.3 million people.

That's more than the population of many nations.

-continues in next episode

## "ದಮನಿತರನ್ನು ಮೇಲೆತ್ತುವ ಕಾರ್ಯ ನಡೆಯಬೇಕಾಗಿದೆ: ಸಚಿವ ವಿನಯ್ ಕುಲಕರ್ಣಿ"

ಸಮಾಜದಲ್ಲಿ ಅನ್ಯಾಯಕ್ಕೆ ಮತ್ತು ದಯನಿಯ ಸ್ಥಿತಿಯನ್ನು ಹೊಂದಿದ ಸಮುದಾಯವನ್ನು ಮೇಲೆತ್ತುವ ಕೆಲಸ ಮಾಡಬೇಕಾಗಿದೆ ಎಂದು ಗಣಿ ಮತ್ತು ಭೂವಿಜ್ಞಾನ, ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ವಿನಯ ಕುಲಕರ್ಣಿ ಅಭಿಪ್ರಾಯ ಪಟ್ಟರು ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರೆನ್ ಸಭಾಂಗಣದಲ್ಲಿ ಕರ್ನಾಟಕ ಸರಕಾರ, ಸಮಾಜ–ಕಲ್ಯಾಣ ಇಲಾಖೆ ಮತ್ತು ಕರ್ನಾಟಕ ಕಲಾ ಮಹಾವಿದ್ಯಾಲಯದ ಸಹಯೋಗದಲ್ಲಿ ಡಾ ಬಾಬಾ ಸಾಹೇಬ ಅಂಬೇಡ್ಕರ್ ಅವರ 125ನೆ ವರ್ಷಾಚರಣೆಯ ಅಂಗವಾಗಿ ಆಯೋಜಿಸಿದ್ದ ಅಂಬೇಡ್ಕರ್ ಬದಕು–ಬರಹ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಇಂದು ಅಂಬೇಡ್ಕರ್ ಕೇವಲ ಸಿಮೀತ ವರ್ಗಕ್ಕೆ ಮಾತ್ರ ಮೀಸಲಾಗದೇ ಅವರ ಎಲ್ಲ ತತ್ವಗಳನ್ನು ಮತ್ತು ಅವರು ಕೊಟ್ಟಂತಹ ಸಂದೇಶವನ್ನು ಎಲ್ಲ ಸಮುದಾಯಗಳಿಗೆ ತಿಳಿಸಬೇಕಾದ ಅವಶ್ಯಕತೆ ಇದೆ ಎಂದರು.

ಇಂದು ಅನೇಕರು ಮೀಸಲಾತಿಯನ್ನು ಅನುಭವಿಸಿದವರು ಇನ್ನೊಬ್ಬರಿಗೂ ಮೀಸಲಾತಿಯನ್ನು ಅನುಭವಿಸಲು ಸಹಕಾರ ನೀಡಿದಾಗ ಎಲ್ಲರಿಗೂ ಮೀಸಲಾತಿಯ ಯೋಜನೆಯನ್ನು ತಲುಪಿಸಲು ಸಾಧ್ಯ ಎಂದರು. ಡಾ ಬಾಬಾ ಸಾಹೇಬ ಅಂಬೇಡ್ಕರ ಅವರು ನಮ್ಮ ಕುಟುಂಬದ ಜೊತೆಗೆ ನಂಟು ಹೊಂದಿದ್ದ–ರಿಂದ ನನಗೆ ಒಂದು ಹಮ್ಮೆಯ ಸಂಗತಿ ಎಂದು ಘಟನಾವಳಿಗೆಗಳನ್ನು ನೆನಪಿಸಕೊಂಡ ಅವರು ಅಂಬೇಡ್ಕರ್ ಅವರು ಅನೇಕ ಕಷ್ಟದಿಂದ, ಪ್ರಾಮಾಣಿಕತೆಯಿಂದ ದಮನಿತರಿಗೆ



ಗಣಿ ಮತ್ತು ಭೂವಿಜ್ಞಾನ, ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ವಿನಯ ಕುಲಕರ್ಣಿ ಅಂಬೇಡ್ಕರ್ ಬದಕು–ಬರಹ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವದು.

ಧ್ವನಿಯಯಾಗಿ ನಿಂತವರು ಅವರ ಹಾಕಿಕೊಟ್ಟಂತಹ ಸಂದೇಶವನ್ನು ಮುಂದಿನ ಪಿಳಿಗೆ ಅನುಸರಿಸಬೇಕು ಎಂದರು. ಇಂದು ಹಳ್ಳಗಳಲ್ಲಿ ಅಸ್ಪೃಶ್ಯತೆಯಂತಹ ಅನಿಷ್ಟ ಪದ್ಧತಿಗಳು ಆಚರಣೆಯಲ್ಲಿರುವದು ವಿಪರ್ಯಾಸ ಎಂದು ವಿಷಾದಿಸದರು. ಎಲ್ಲರ ಮನಸ್ಸುಗಳು ಬದಲಾವಣೆಯಿಂದ ಸಮಾಜದಲ್ಲಿ ಬದಲಾವಣೆ ತರಲು ಸಾದ್ಯ ಎಂದರು. ಪ್ರಾಸ್ತಾವಿಕವಾಗಿ ಮಾತನಾಡಿದ ಅಂಬೇಡ್ಕರ ಜ್ಞಾನದರ್ಶನ ಅಭಿಯಾನದ ವಲಯ ಸಂಯೋಜಕರಾದ ಬಸವರಾಜ ಸೂಳಿಬಾವಿ ಮಾತನಾಡಿ ಇಂದು ರಾಜ್ಯದಲ್ಲಿರುವ ಎಲ್ಲ ಶಾಲೆ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಅಂಬೇಡ್ಕರ್ ಅವರ ಚಿಂತನಗಳನ್ನು ತಲುಪಿಸುವ ಅಭಿಯಾನದ ಒಂದು ಉದ್ದೇಶವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ ವಹಿಸಿದ್ದರು. ಕಾರ್ಯಕ್ರಮದಲ್ಲಿ ಕವಿವಿ ಧಾರವಾಡದ ಇತಿಹಾಸ ಪ್ರಾಧ್ಯಾಪಕರಾದ ಡಾ ಶಿವರುದ್ರ ಕಲ್ಲೋಳಕರ ಅವರು ಜಾತಿ ವಿನಾಶ ಹಾಗೂ ರಾಜ್ಯಗಳು ಮತ್ತು ಅಲ್ಪಸಂಖ್ಯಾತರು ಎಂಬ ವಿಷಯದ ಮೇಲೆ ಉಪನ್ಯಾಸ ನೀಡದರು. ಕವಿವಿಯ ಮಾನವ ಶಾಸ್ತ್ರ ವಿಭಾಗದ ಡಾ. ಎಸ್ ಬಿ ಸುಗಂದಿ ಕ್ರಾಂತಿ ಮತ್ತು ಪ್ರತಿಕ್ರಾಂತಿ ಎಂಬ ಉಪನ್ಯಾಸ ನೀಡಿದರೆ, ಸರಕಾರಿ ಪ್ರಥಮ ದರ್ಜೆಯ ಸಮಾಜ ಶಾಸ್ತ್ರ ಪ್ರಾಧ್ಯಾಪಕರಾದ ಡಾ ಎಸ್ ಬಿ ಜೋಗೂರ್ ಹಿಂದು ಕೊಡ್ ಬಿಲ್ ಕು–ರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ವಿಷಯಗಳ ಕು–ರಿತು ವಿದ್ಯಾರ್ಥಿಗಳು ಸಂಪನ್ಮೂಲವ್ಯಕ್ತಿಗಳ ಜೊತೆಸಂವಾದ ನಡಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಉಪ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೆಶ್ವರಯ್ಯ ಮತ್ತು ಪ್ರಾಧ್ಯಾಪಕರಾದ ಡಾ.ಎಂ.ಬಿ.ದಳಪತಿ, ಡಾ.ಮಹದೆವಯ್ಯ, ಡಾ.ಮಹೇಶ ಪಾಟೀಲ್ ಡಾ. ಕೆ ಜಗದಿಶ್, ಡಾ.ತಾಯಪ್ಪ ಡಾ.ಸೂಮು ದೂಡಮನಿ, ಡಾ ಹೋನ್ನೆಶ್ ಕಡೆನಾಯಕನಹಳ್ಳಿ ಡಾ ಸುಣಗಾರ, ಡಾ ಸಿರಿಗೇರಿ, ಡಾ ಎಸ್ ಎಸ್ ಹುಲ್ಲನ್ನವರ್ ಡಾ ಎಸ್ ಬಿ ಜಾಧವ್ ಮುಂತಾದವರು ಹಾಜರಿದ್ದರು. ಜಿಲ್ಲಾ ಅಂಬೇಡ್ಕರ ಜ್ಞಾನದರ್ಶನ ಅಭಿಯಾನದ ಜಿಲ್ಲಾ ಸಂಯೋಜಕರಾದ ವೆಂಕನಗೌಡ್ ಆರ್ ಪಾಟೀಲ್ ಕಾರ್ಯಕ್ರಮವನ್ನು ನಿರೂಪಿಸದರು ಡಾ ಪ್ರಭಾಕರ ಕಾಂಬಳೆ ವಂದಿಸಿದರು.

–ಕಿರಣ್ ಟೋಪಿಣಾ

## "ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಸತತ ಅಧ್ಯಯನ ಮತ್ತು ಸ್ವಯಂ ಶಿಸ್ತು ಅತ್ಯಗತ್ಯ"

ಬಡತನ, ಅವಮಾನ, ಹಸಿವು, ಅವಶ್ಯಕ ಕೊರತೆಗಳು ನಮ್ಮನ್ನು ಏನನ್ನಾದರೂ ಸಾಧಿಸಲು ಮತ್ತು ಉತ್ತೇಜಿಸಲು ಇರುವ ಸಂಗತಿಗಳಾಗಿವೆ. ಎಂದು 'ದಿ ಕ್ಲಾಸಿಕ್ ಕೆ.ಎ.ಎಸ್ ಮತ್ತು ಆಯ್.ಎ.ಎಸ್ ಸ್ಟಡಿ ಸರ್ಕಲ್'ನ ನಿರ್ದೇಶಕ ಲಕ್ಷ್ಮಣ ಉಪ್ಪಾರ ಅಭಿಪ್ರಾಯ ಪಟ್ಟರು.

ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರೇನ್ ಸಭಾಂಗಣದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಕ್ರಿಯೆಟಿವ್ ರೆಸ್ಪಾನ್ಸ್ ಫೊರಮ್, ಮಾನವಶಾಸ್ತ್ರ ವಿಭಾಗ, ಡಿಬೇಟ್ ಆಂಡ್ ವಾಲ್‌ಪೇಪರ್ ವಿಭಾಗ ಮತ್ತು ಧಾರವಾಡದ 'ದಿ ಕ್ಲಾಸಿಕ್ ಕೆ.ಎ.ಎಸ್. ಮತ್ತು ಆಯ್.ಎ.ಎಸ್ ಸ್ಟಡಿ ಸರ್ಕಲ್' ಇವುಗಳ ಸಂಯುಕ್ತ ಆಶ್ರಯಲ್ಲಿ "ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಜೀವನ ಕೌಶಲ್ಯಗಳು ಎಂಬ ವಿಷಯಧ ಕುರಿತು "ಸ್ಪರ್ಧಾ ಸುರಭಿ" ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತಿದ್ದರು.

ವಿದ್ಯಾರ್ಥಿಗಳಿಗೆ ಪದವಿ ಹಂತವು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಜ್ಜುಗೊಳ್ಳಲು ಉತ್ತಮವಾದ ಒಂದು ಸಮಯವಾಗಿದ್ದು, ವಿಜ್ಞಾನ, ಸಮಾಜ ವಿಜ್ಞಾನ, ಇಂಜನಿಯ–ರಿಂಗ್, ಕಾಮರ್ಸ, ವೈದ್ಯಕೀಯ ಹೀಗೆ ಹಲವಾರು ಎಲ್ಲ ವಲಯಗಳಿಂದ




ಧಾರವಾಡದ 'ದಿ ಕ್ಲಾಸಿಕ್ ಕೆ.ಎ.ಎಸ್ ಮತ್ತು ಆಯ್.ಎ.ಎಸ್ ಸ್ಟಡಿ ಸರ್ಕಲ್'ನ ನಿರ್ದೇಶಕ ಲಕ್ಷ್ಮಣ ಉಪ್ಪಾರ 'ಸ್ಪರ್ಧಾ ಸುರಭಿ' ಕಾರ್ಯಾಗಾರವನು ಉದ್ದೇಶಿಸಿ ಮಾತನಾಡುತ್ತಿರುವದು ಚಿತ್ರದಲ್ಲಿ ಡಾ. ಎಸ್.ಜಿ.ಜಾಧವ್, ಡಾ. ಅಮೃತ ಯಾದ್ರಿ, ಡಾ. ಕೀರ್ತಿ ಅಷ್ಟಗಿಮಠ ಅವರನ್ನು ಕಾಣಬಹುದು.

ವಿದ್ಯಾರ್ಥಿಗಳಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸ್ಪರ್ಧೆ ಇರವುದರಿಂದ ವಿದ್ಯಾರ್ಥಿಗಳಿಗೆ ಪೂರ್ವ ತಯಾರಿ ಬಹಳ ಮುಖ್ಯವಾಗಿದೆ ಎಂದರು. ಜೀವನದಲ್ಲಿ ವಿದ್ಯಾರ್ಥಿಗಳು ಗುರಿ, ಕನಸ್ಸು ಹೊಂದಿರಬೇಕಾಗಿದ್ದು ಅವಶ್ಯಕವಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯು ಒಂದು ಉದ್ದೇಶವನ್ನು ಹೊಂದಿದಾಗ ಮಾತ್ರ ಏನನ್ನಾದರೂ ಸಾಧಿಸಲು ಸಾಧ್ಯ .ಆದ್ದರಿಂದ ನಮ್ಮ ವ್ಯಕ್ತಿತ್ವ, ಆಲೋಚನೆ, ನಮ್ಮ ಸತತ ಪ್ರಯತ್ನದೊಂದಿಗೆ ಕಠಿಣ ಪರಿಶ್ರಮ, ಸ್ವಯಂ ಶಿಸ್ತು, ವಿದ್ಯಾರ್ಥಿಗಳಿಗೆ ಇರಬೇಕಾದ ಮಹತ್ವವಾದ ಗುಣಗಳಿಂದ ನಮ್ಮ ಜಯವನ್ನು ಯಾರು ತಡೆಯಲು ಸಾಧ್ಯವಿಲ್ಲ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಕಲಾ ಮಹಾವಿದ್ಯಾಲಯದ ಕ್ರೀಯೆಟಿವ್ ರೆಸ್ಪಾನ್ಸ್ ಫೊರಮ್ ಸಂಚಾಲಕ ಮತ್ತು ಮರಾಠಿ ವಿಭಾಗದ ಪ್ರಾಧ್ಯಾಪಕರಾದ ಡಾ. ಅಮೃತ ಯಾರ್ದಿ ಮಾತನಾಡಿ ವಿದ್ಯಾರ್ಥಿಗಳಿಗೆ ಅವಕಾಶಗಳ ಕೂರತೆ ಆಗಬಾರದು ಎಂಬ ಉದ್ದೇಶದಿಂದ ಮತ್ತು ಅವರ ಮುಂದಿನ ಭವಿಷ್ಯದ ದೃಷ್ಟಿಕೋನದಿಂದ ಈ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಆದ್ದರಿಂದ ಇದರ ಸದುಪಯೋಗವನ್ನು ಪ್ರತಿಯೋಬ್ಬ ವಿದ್ಯಾರ್ಥಿಯು ಪಡೆದುಕೊಳ್ಳಬೇಕು ಎಂದ ಅವರು ವಿದ್ಯಾರ್ಥಿಗಳಿಗೆ ಪ್ರಯತ್ನ ಶೀಲರಾಗಿ ಉದಾತ ಮಹತ್ವಕಾಂಕ್ಷಿ ಗುರಿ ಹೊಂದಿರಬೇಕು ಎಂದರು.

ವೇದಿಕೆಯಲ್ಲಿ ಮನೋವಿಜ್ಞಾನ ವಿಭಾಗದ ಡಾ. ಎಸ್ ಜಿ ಜಾಧವ ಮತ್ತು ಡಿಬೇಟ್ ಆಂಡ್ ವಾಲ್‌ಪೇಪರ್ ವಿಭಾಗದ ಡಾ ಕೀರ್ತಿ ಅಷ್ಟಗಿಮಠ ಇದ್ದರು, ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ ಅರುಣಾ ಹಳ್ಳಿಕೇರಿ, ಡಾ ಶಾರದಾ, ಡಾ.ಎಂ.ಬಿ ದಳಪತಿ ಮತ್ತು ದಿ ಕ್ಲಾಸಿಕ್ ಸ್ಟಡಿ ಸರ್ಕಲ್‌ನ ಸಿಬ್ಬಂದಿ ವರ್ಗ ಹಾಜ–ರಿದ್ದರು. ಪದವಿ ಕೊನೆಯ ವರ್ಷದ ವಿದ್ಯಾರ್ಥಿಗಳಾದ ಪೂರ್ಣಚಂದ್ರ ಅತಿಥಿಗಳನ್ನು ಪರಿಚಯಿಸದರು, ಕಾರ್ಯಕ್ರಮವನ್ನು ದತ್ತನಿರಂಜನ ನಿರೂಪಿಸದರೆ, ಕುಮಾರಿ ಯಶೋಧಾ ವಂದಿಸಿದರು.


ಗೌರವ ಸಂಪಾದಕರು: ಡಾ. ಎಸ್.ಎಸ್.ಕಟ್ಟಿಮನಿ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬಳೆ, ಡಾ.ಈಶ್ವರ್ ಗೌಡ ಪಾಟೀಲ್, ವಿದ್ಯಾರ್ಥಿ ಸಂಪಾದಕರು: ಸುನೀಲ,ನಿತಿನ್. ಪುಟ ವಿನ್ಯಾಸ: ಶ್ರೀಹರಿ.